# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ

## ಸ್ಪೆಷಲ್ ಎಸ್.ಸಿ./ಎಸ್.ಟಿ.28/2025

Pw-01

Cw-01

ಸಾಕ್ಷಿದಾರರ ಹೆಸರುಃ ಶ್ರೀ ಭರಮಪ್ಪ ಬಂಗೇರ

ತಂದೆಃಗಂಡನ ಹೆಸರುಃ ಶ್ರೀ ಹಾಲಪ್ಪ

ವಯಸ್ಸುಃ 53 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಹಾರೋಗೊಪ್ಪ ತಾಃ ರಾಣೇಬೆನ್ನೂರು

**ದಿನಾಂಕ:10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈ ದಿನ ನ್ಯಾಯಾಲಯದ ಆರೋಪಿತರು ನನಗೆ ಗೊತ್ತು. ನಾನು ಹಿಂದೂ ವಾಲ್ಮೀಕಿ ಜಾತಿಗೆ ಸೇರಿರುತ್ತೇನೆ. ಆರೋಪಿತರು ಹಿಂದೂ ಕುರುಬ ಜಾತಿಗೆ ಸೇರಿರುತ್ತಾರೆ. ಈಗ್ಗೆ ಒಂದು ವರ್ಷದ ಹಿಂದೆ ನಮ್ಮೂರಿನ ಕುರುಬ ಜಾತಿಗೆ ಸೇರಿದ ಒಬ್ಬ ಹುಡುಗ ಚಿತ್ರದುರ್ಗದಿಂದ ಒಬ್ಬ ಹುಡುಗಿಯನ್ನು ಕರೆದುಕೊಂಡು ಬಂದಿದ್ದನು. ಆಗ ಚಿತ್ರದುರ್ಗದ ಹುಡುಗಿ ಮನೆಯವರು ಹುಡುಗಿಯನನು ಕರೆದುಕೊಂಡು ಹೋಗಲು ನಮ್ಮೂರಿಗೆ ಬಂದಿದ್ದರು. ಆಗ ನಮ್ಮೂರಿನ ಯಜಮಾನರು ಪಂಚಾಯತಿ ಮಾಡಿ ಸದರಿ ಹುಡುಗಿಯನ್ನು ಆಕೆಯ ತಂದೆ-ತಾಯಿ ಜೊತೆ ನಮ್ಮೂರಿನಿಂದ ಚಿತ್ರದುರ್ಗಕ್ಕೆ ಕಳಿಸಿಕೊಟ್ಟರು. 1 ನೇ ಆರೋಪಿಯು ರಾಜೀ ಪಂಚಾಯತಿ ಮಾಡುವಾಗ ಕುಡಿದು ಬಂದು ಗಲಾಟೆ ಮಾಡುತ್ತಿದ್ದನು. ಆಗ ಪಂಚಾಯತಿದಾರರು 1 ನೇ ಆರೋಪಿಗೆ ಬೈದು ಬುದ್ದಿವಾದ ಹೇಳಿ ಕಳಿಸಿಕೊಟ್ಟರು.

2. ಅದೇ ದಿನ ರಾತ್ರಿ 7.30-8.00 ಗಂಟೆ ಸಮಯದಲ್ಲಿ ನಾನು ನಮ್ಮೂರಿನ ಹನುಮಂತ ದೇವರ ಸರ್ಕಲ್ ಹತ್ತಿರ ಕುಳಿತುಕೊಂಡಿದ್ದೆನು. ಆಗ ಅಲ್ಲಿಗೆ 1 ನೇ ಆರೋಪಿಯು

ಬಂದು ನನ್ನನ್ನು ಕರೆದರು. ಆಗ ನಾನು 1 ನೇ ಆರೋಪಿಯ ಜೊತೆ ಹೋದೆನು. 1 ನೇ ಆರೋಪಿಯು ಕಲ್ಲನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದನು. 1 ನೇ ಆರೋಪಿಯು ತಳವಾರ ಜಾತಿಗೆ ಹುಟ್ಟಿದವರು ಎಷ್ಟು ಜನ ಇದ್ದೀರಿ, ನಿಮ್ಮಪ್ಪನಿಗೆ ಹುಟ್ಟಿದ್ದರೆ ಬನ್ನಿ ಎಂದು ಬೈದರು. 1 ನೇ ಆರೋಪಿಯ ತಂದೆ ಬೀರಪ್ಪ ಬಂದು ನನಗೆ ನಮ್ಮ ಮನೆ ಸುದ್ದಿ ನಿನಗೇಕೆ ಬೇಕು ಎಂದು ಬೈದನು.

3. 1 ನೇ ಆರೋಪಿಯು ನನಗೆ ಕಲ್ಲಿನಿಂದ ಹೊಡೆದಾಗ ನನ್ನ ತಲೆಯಿಂದ ರಕ್ತ ಬಂತು. ಆಗ ನನ್ನ ಅಣ್ಣನ ಮಗ ಪ್ರವೀಣ ಮೋಟಾರ್ ಸೈಕಲ್ ತೆಗೆದಕೊಂಡು ಬಂದು ನನ್ನನ್ನು ಹಲಗೇರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದನು. ಆಗ ಪೊಲೀಸರು ಬರೆದುಕೊಂಡು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲಾಗಿ ಎಂದು ಕಳಿಸಿಕೊಟ್ಟರು. ಆಗ ನಮ್ಮ ಅಣ್ಣನ ಮಗ ಪ್ರವೀಣ ಈತನು ಮೋಟಾರ್ ಸೈಕಲ್ ನಲ್ಲಿ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲುಮಾಡಿದನು. ಅಲ್ಲಿ ವೈದ್ಯರು ನನ್ನನ್ನು ಒಂದು ರಾತ್ರಿ ಆಸ್ಪತ್ರೆಯಲ್ಲಿ ದಾಖಲುಮಾಡಿಕೊಂಡು ಚಿಕಿತ್ಸೆ ನೀಡಿ ತಲೆಗೆ ಸ್ಕ್ಯಾನಿಂಗ್ ಮಾಡಿಸಲು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬರೆದುಕೊಟ್ಟರು. ಆಗ ನಾನು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಬಂದು ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

4. ನಂತರ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲುಮಾಡಿರುತ್ತೇನೆ. ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–4 ಎಂದು, ನನ್ನ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–5 ಎಂದು ಗುರುತಿಸಲಾಯಿತು. ನಿಪಿ–5 ರಲ್ಲಿ ನನ್ನ ಡಿಜಿಟಲ್ ಸಹಿ ಇರುತ್ತದೆ.

5. ದೂರು ಕೊಟ್ಟ 2 ದಿನಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿಕೊಟ್ಟು ನಾನು ತೋರಿಸಿದ ಜಾಗದಲ್ಲಿ ಸ್ಥಳ ಪಂಚನಾಮೆ ಮಾಡಿಕೊಂಡು, ನನ್ನ ಸಹಿ ಪಡೆದುಕೊಂಡರು. ಪೊಲೀಸರು ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಅಲ್ಲಿದ್ದ ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಮಾಡುವ ಕಾಲಕ್ಕೆ ಪೊಲೀಸರು

ಪೋಟೋವನ್ನು ಸಹ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–6 ಎಂದು, ನನ್ನ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ಪೊಲೀಸರು ತೆಗೆದ ಪೋಟೋವನ್ನು ಈಗ ನೋಡತ್ತಿದ್ದು, ಅದನ್ನು ನಿಪಿ–7 ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ಪೊಲೀಸರು ಕಲ್ಲನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದ ಕಾರಣ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.